**ಮಂಗಳೂರು ವಿಶ್ವವಿದ್ಯಾನಿಲಯ**

**ದಿನಾಂಕ 28.02.2022ರಂದು ಪೂರ್ವಾಹ್ನ ಗಂಟೆ 10.00 ಕ್ಕೆ ಸರಿಯಾಗಿ ಮಂಗಳೂರು ವಿಶ್ವವಿದ್ಯಾನಿಲಯದ ಆಡಳಿತ ಸೌಧದ ಸಿಂಡಿಕೇಟ್ ಸಭಾಂಗಣದಲ್ಲಿ ನಡೆದ ಸಿಂಡಿಕೇಟಿನ 2022ನೇ ಸಾಲಿನ ದ್ವಿತೀಯ ಸಾಮಾನ್ಯ ಸಭೆಯ ನಡವಳಿಗಳು.**

**ಉಪಸ್ಥಿತರು**

**ಅನುಪಸ್ಥಿತರು**

**ಪ್ರಾರಂಭಿಕ**

ಪ್ರಾರಂಭದಲ್ಲಿ ಕುಲಸಚಿವರು ಸಭಾಧ್ಯಕ್ಷರಾದ ಮಾನ್ಯ ಕುಲಪತಿಗಳು ಹಾಗೂ ಎಲ್ಲಾ ಸಿಂಡಿಕೇಟು ಸದಸ್ಯರುಗಳನ್ನು ಸಭೆಗೆ ಸ್ವಾಗತಿಸಿದರು.

**ಪ್ರಾಸ್ತಾವಿಕ**

- ಕುಲಸಚಿವರ ಪತ್ರ ಸಂಖ್ಯೆ : ಮಂವಿ/ಕು.ಸ/ಸಿಬ್ಬಂದಿ(ಇ3)/15/2022 ದಿನಾಂಕ 07.02.2022 ಮಂಗಳೂರು ವಿಶ್ವವಿದ್ಯಾನಿಲಯದ ಹಣಕಾಸು ಅಧಿಕಾರಿ ಹುದ್ದೆಯ ಪ್ರಭಾರವನ್ನು ವಹಿಸಿಕೊಂಡಿರುವ ಪ್ರೊ.ವೈ.ಮುನಿರಾಜು, ಹಣಕಾಸು ಅಧಿಕಾರಿ (ಪ್ರಭಾರ) ಹಾಗೂ ಪ್ರಾಧ್ಯಾಪಕರು, ಸ್ನಾತಕೋತ್ತರ ವಾಣಿಜ್ಯ ಅಧ್ಯಯನ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ ಇವರು ವಿಶ್ವವಿದ್ಯಾನಿಲಯದ ಸಿಂಡಿಕೇಟು ಸಭೆಗಳಿಗೆ ಹಣಕಾಸು ಅಧಿಕಾರಿಯವರ ನೆಲೆಯಲ್ಲಿ ವಿಶೇಷ ಆಹ್ವಾನಿತರಾಗಿ ಆಗಮಿಸಿದ್ದು, ಇವರನ್ನು ಕುಲಸಚಿವರು ಸಭೆಗೆ ಸ್ವಾಗತಿಸಿದರು.

- ಮಂಗಳೂರು ವಿಶ್ವವಿದ್ಯಾನಿಲಯದ ಸಿಂಡಿಕೇಟು ಸಭೆಗಳಿಗೆ ಪ್ರಭಾರ ಹಣಕಾಸು ಅಧಿಕಾರಿಯವರ ನೆಲೆಯಲ್ಲಿ ವಿಶೇಷ ಆಹ್ವಾನಿತರಾಗಿ ಭಾಗವಹಿಸುತ್ತಿದ್ದ ಪ್ರೊ. ಬಿ.ನಾರಾಯಣ, ಪ್ರಾಧ್ಯಾಪಕರು, ಸ್ನಾತಕೋತ್ತರ ರಸಾಯನಶಾಸ್ತ್ರ ಅಧ್ಯಯನ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ ಇವರನ್ನು ಕುಲಸಚಿವರ ಪತ್ರ ಸಂಖ್ಯೆ:ಮಂವಿ/ಕು.ಸ/ಸಿಬ್ಬಂದಿ(ಇ3)/15/2022 ದಿನಾಂಕ 07.02.2022 ರ ಮೂಲಕ ಹಣಕಾಸು ಅಧಿಕಾರಿ ಹುದ್ದೆಯಿಂದ ಬಿಡುಗಡೆಗೊಳಿಸಲಾಗಿರುವ ವಿಷಯವನ್ನು ಕುಲಸಚಿವರು ಸಭೆಗೆ ತಿಳಿಸಿದರು. ಇವರು ತಮ್ಮ ಸಿಂಡಿಕೇಟು ಸದಸ್ಯತ್ವದ ಅವಧಿಯಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದ ಸರ್ವತೋಮುಖ ಪ್ರಗತಿಗೆ ಹಾಗೂ ಉನ್ನತ ಶಿಕ್ಷಣದ ಸರ್ವಾಂಗೀಣ ಅಭಿವೃದ್ಧಿಗೆ ಪೂರಕ ಸಲಹೆ ಮತ್ತು ಸಹಕಾರಗಳನ್ನು ನೀಡಿರುವುದಕ್ಕಾಗಿ ಇವರಿಗೆ ಸಿಂಡಿಕೇಟು ಹಾಗೂ ಮಂಗಳೂರು ವಿಶ್ವವಿದ್ಯಾನಿಲಯದ ಪರವಾಗಿ ಕೃತಜ್ಞತಾಪೂರ್ವಕ ಅಭಿನಂದನೆಗಳನ್ನು ಸಲ್ಲಿಸಲಾಯಿತು.

  ತದನಂತರ ಸಭೆಯನ್ನು ಮುಂದುವರಿಸುವಂತೆ ಕುಲಪತಿಗಳನ್ನು ವಿನಂತಿಸಿದರು.

  ಮಾನ್ಯ ಕುಲಪತಿಯವರು ಎಲ್ಲಾ ಸದಸ್ಯರುಗಳನ್ನು ಸಭೆಗೆ ಮತ್ತೊಮ್ಮೆ ಸ್ವಾಗತಿಸಿ, ರಾಷ್ಟ್ರೀಯ ವಿಜ್ಞಾನ ದಿನದ ಶುಭಾಶಯಗಳನ್ನು ತಿಳಿಸಿದರು.

## I. ನಡವಳಿಗಳ ದೃಢೀಕರಣ

1. ದಿನಾಂಕ 28.01.2022ರಂದು ನಡೆದ ಸಿಂಡಿಕೇಟಿನ 2022ನೇ ಸಾಲಿನ ಪ್ರಥಮ ಸಾಮಾನ್ಯ ಸಭೆಯ ನಡವಳಿಯ ದೃಢೀಕರಣ.
   ದೃಢೀಕರಿಸಲಾಯಿತು.

**II. ಅನುಸರಣಾ ವರದಿಯ ಅನುಮೋದನೆ**

ದಿನಾಂಕ 30.12.2021ರಂದು ನಡೆದ ಸಿಂಡಿಕೇಟಿನ 2021ನೇ ಸಾಲಿನ ಎಂಟನೇ ಸಾಮಾನ್ಯ ಸಭೆಯ ನಿರ್ಣಯದ ಮೇಲೆ ತೆಗೆದುಕೊಂಡ ಕ್ರಮದ ಅನುಸರಣಾ ವರದಿಯ ಅನುಮೋದನೆ.

ಅನುಮೋದಿಸಲಾಯಿತು.

**III. ಈ ಸಿಂಡಿಕೇಟು ಸಭೆಗೆ ಮಂಡಿಸಿರುವ ಕಾರ್ಯಸೂಚಿಗಳು:**

**ಕಾರ್ಯಸೂಚಿ ಸಂಖ್ಯೆ:ಇಡಿ:ಸಾ.ಸ.2:1 (2022)**

ವಿಷಯ: Construction of Compound wall to the Girls Hostel Jnana Kavery PG Centre ChikkaAluvara, Kodagu Dist.

–ಅಂದಾಜು ಮೊತ್ತ ರೂ.18.15 ಲಕ್ಷಗಳು

ನಿರ್ಣಯ: ವಿಸ್ತೃತ ಚರ್ಚೆಯ ಅಗತ್ಯವಿರುವುದರಿಂದ ಕಾರ್ಯಸೂಚಿಯನ್ನು ಮುಂದಿನ ಸಭೆಗೆ ಮಂಡಿಸಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:ಇಡಿ:ಸಾ.ಸ.2:2(2022)**

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯ ಆವರಣದಲ್ಲಿರುವ "ಬಿ" ಮಾದರಿ ಬ್ಲಾಕ್ 2ರ ಹೊರ ಭಾಗಗಳ ನಿರ್ವಹಣೆ ಹಾಗೂ ವಸತಿಗೃಹ ಸಂಖ್ಯೆ ಅನುಮೋದನೆ ಬಗ್ಗೆ.

–ಅಂದಾಜು ಮೊತ್ತ ರೂ.15.75 ಲಕ್ಷ

ನಿರ್ಣಯ: ವಿಸ್ತೃತ ಚರ್ಚೆಯ ಅಗತ್ಯವಿರುವುದರಿಂದ ಕಾರ್ಯಸೂಚಿಯನ್ನು ಮುಂದಿನ ಸಭೆಗೆ ಮಂಡಿಸಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:ಇಡಿ:ಸಾ.ಸ.2:3 (2022)**

ವಿಷಯ: ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು ಇಲ್ಲಿ ಶತಮಾನೋತ್ಸವ ಕಟ್ಟಡದ ಅಗತ್ಯದ ದುರಸ್ತಿ ಹಾಗೂ ನಿರ್ವಹಣಾ ಕಾಮಗಾರಿ

–ಅಂದಾಜು ಮೊತ್ತ ರೂ.39.50ಲಕ್ಷಗಳು

ನಿರ್ಣಯ: ವಿಸ್ತೃತ ಚರ್ಚೆಯ ಅಗತ್ಯವಿರುವುದರಿಂದ ಕಾರ್ಯಸೂಚಿಯನ್ನು ಮುಂದಿನ ಸಭೆಗೆ ಮಂಡಿಸಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:ಇಡಿ:ಸಾ.ಸ.2:4 (2022)**

ವಿಷಯ: ವಿಶ್ವವಿದ್ಯಾನಿಲಯ ಕಾಲೇಜು, ಮಂಗಳೂರು ಇಲ್ಲಿನ ವಿಜ್ಞಾನ ವಿಭಾಗಗಕ್ಕೆ ಸಂಬಂಧಿಸಿದ ಪ್ರಯೋಗಾಲಯಗಳ ಅಗತ್ಯದ ದುರಸ್ಥಿ ಮತ್ತು ನಿರ್ವಹಣಾ ಕಾಮಗಾರಿ–Component 9 of RUSA 2.0 Grant

–ಅಂದಾಜು ಮೊತ್ತ ರೂ.16.68 ಲಕ್ಷಗಳು

ನಿರ್ಣಯ: ವಿಸ್ತೃತ ಚರ್ಚೆಯ ಅಗತ್ಯವಿರುವುದರಿಂದ ಕಾರ್ಯಸೂಚಿಯನ್ನು ಮುಂದಿನ ಸಭೆಗೆ ಮಂಡಿಸಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:ಇಡಿ:ಸಾ.ಸ.2:5 (2022)**

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ಆವರಣದಲ್ಲಿರುವ 0.5MGD ಸಾಮರ್ಥ್ಯದ ನೀರು ಶುದ್ಧೀಗಾರಕ್ಕೆ ಆವರಣಗೋಡೆ ನಿರ್ಮಿಸುವುದು ಮತ್ತು ಬಿಟುಮಿನಸ್ (ಟಾರು) ಹಾಸನ್ನು ಪ್ರವೇಶರಸ್ತೆಗೆ ಅಳವಡಿಸುವುದು– ಅಂದಾಜು ಪಟ್ಟಿ ಅನುಮೋದನೆ ಬಗ್ಗೆ.

ನಿರ್ಣಯ: ವಿಸ್ತೃತ ಚರ್ಚೆಯ ಅಗತ್ಯವಿರುವುದರಿಂದ ಕಾರ್ಯಸೂಚಿಯನ್ನು ಮುಂದಿನ ಸಭೆಗೆ ಮಂಡಿಸಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:ಇಡಿ:ಸಾ.ಸ.2:6(2022)**

ವಿಷಯ: Extension work behind Mangala Canteen for the construction of Food court at Mangalore University Campus, Mangalagangotrhi ಟೆಂಡರುಅಂಗೀಕರಿಸುವ ಬಗ್ಗೆ.

ನಿರ್ಣಯ: ವಿಸ್ತೃತ ಚರ್ಚೆಯ ಅಗತ್ಯವಿರುವುದರಿಂದ ಕಾರ್ಯಸೂಚಿಯನ್ನು ಮುಂದಿನ ಸಭೆಗೆ ಮಂಡಿಸಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:ಇಡಿ:ಸಾ.ಸ.2:7(2022)**

ವಿಷಯ: Disposal of waste collected in dustbins at Mangalore University, Campus – ಟೆಂಡರ್ ಅಂಗೀಕರಿಸುವ ಬಗ್ಗೆ.

ನಿರ್ಣಯ: ವಿಸ್ತೃತ ಚರ್ಚೆಯ ಅಗತ್ಯವಿರುವುದರಿಂದ ಕಾರ್ಯಸೂಚಿಯನ್ನು ಮುಂದಿನ ಸಭೆಗೆ ಮಂಡಿಸಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:ಇಡಿ:ಸಾ.ಸ.2:8(2022)**

ವಿಷಯ: Supply of 60 KLD advanced sequencing batch reactor (SBR) technology Sewage Water Treatment Plant at International Hostel Mangalore University Campus, Mangalagnagothri – ಟೆಂಡರ್ ಅನುಮೋದನೆ ಬಗ್ಗೆ.

ನಿರ್ಣಯ: ವಿಸ್ತೃತ ಚರ್ಚೆಯ ಅಗತ್ಯವಿರುವುದರಿಂದ ಕಾರ್ಯಸೂಚಿಯನ್ನು ಮುಂದಿನ ಸಭೆಗೆ ಮಂಡಿಸಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:ಇಡಿ: ಸಾ.ಸ.2:9(2022)**

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ಆವರಣದಲ್ಲಿರುವ ವಿಶ್ವಮಂಗಳ ವಿದ್ಯಾಸಂಸ್ಥೆಯಲ್ಲಿ ಶಾಲಾ ಕೊಠಡಿ ನಿರ್ಮಾಣ ಕಾಮಗಾರಿಯ ಹೆಚ್ಚುವರಿ ಪರಿಮಾಣ ಮತ್ತು ಹೆಚ್ಚುವರಿ ಐಟಂ ಮೊತ್ತ ಹಾಗೂ ಪರಿಷ್ಕೃತ ಅಂದಾಜು ಮೊತ್ತದ ಅನುಮೋದನೆ ಬಗ್ಗೆ.

ನಿರ್ಣಯ: ವಿಸ್ತೃತ ಚರ್ಚೆಯ ಅಗತ್ಯವಿರುವುದರಿಂದ ಕಾರ್ಯಸೂಚಿಯನ್ನು ಮುಂದಿನ ಸಭೆಗೆ ಮಂಡಿಸಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:ಇಡಿ: ಸಾ.ಸ.2:10 (2022)**

ವಿಷಯ: Construction of Shree Narayana Guru Adhyayana Peeta Building at Mangalore University Campus Mangalagangothri – ಕಾಲಾವಧಿ ವಿಸ್ತರಣೆ

ನಿರ್ಣಯ: ವಿಸ್ತೃತ ಚರ್ಚೆಯ ಅಗತ್ಯವಿರುವುದರಿಂದ ಕಾರ್ಯಸೂಚಿಯನ್ನು ಮುಂದಿನ ಸಭೆಗೆ ಮಂಡಿಸಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:ಇಡಿ:ಸಾ.ಸ.2:11(2022)**

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯ ಆವರಣದಲ್ಲಿರುವ ಉದ್ಯೋಗ ಮಾಹಿತಿ ಕೇಂದ್ರ ಕಟ್ಟಡದ ಮೊದಲನೇ ಅಂತಸ್ತಿನಲ್ಲಿ ಪರಿಸರ ವಿಜ್ಞಾನ ವಿಭಾಗ ಕಟ್ಟಡದ ನಿರ್ಮಾಣ RUSA ಅನುದಾನ– ಕಾಲಾವಧಿ ವಿಸ್ತರಣೆ

ನಿರ್ಣಯ: ವಿಸ್ತೃತ ಚರ್ಚೆಯ ಅಗತ್ಯವಿರುವುದರಿಂದ ಕಾರ್ಯಸೂಚಿಯನ್ನು ಮುಂದಿನ ಸಭೆಗೆ ಮಂಡಿಸಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:ಇಡಿ:ಸಾ.ಸ.2: 12(2022)**

ವಿಷಯ: Construction of Class Room (including technologically enabled class rooms) for University College, Mangalore under component-9 of RUSA 2.0- ಕಾಲಾವಧಿ ವಿಸ್ತರಣೆ

ನಿರ್ಣಯ: ವಿಸ್ತೃತ ಚರ್ಚೆಯ ಅಗತ್ಯವಿರುವುದರಿಂದ ಕಾರ್ಯಸೂಚಿಯನ್ನು ಮುಂದಿನ ಸಭೆಗೆ ಮಂಡಿಸಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:ಇಡಿ:ಸಾ.ಸ.2:13 (2022)**

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ಕಟ್ಟಡ ನಿರ್ಮಾಣ ಕಾಮಗಾರಿಗಳಿಗೆ ನೇಮಿಸಿರುವ ವಾಸ್ತು ಶಿಲ್ಪಿಗಳ ಐದು ವರ್ಷದ ಸೇವಾ ಅವಧಿಯನ್ನು ವಿಸ್ತರಿಸುವಕುರಿತು.

ನಿರ್ಣಯ: ವಿಸ್ತೃತ ಚರ್ಚೆಯ ಅಗತ್ಯವಿರುವುದರಿಂದ ಕಾರ್ಯಸೂಚಿಯನ್ನು ಮುಂದಿನ ಸಭೆಗೆ ಮಂಡಿಸಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:ಇಡಿ:ಸಾ.ಸ.2:14(2022)**

ವಿಷಯ: Construction of International Hostel, Class room complex and Auditorium Interior works for Mangalore University, Mangalagangothri - ವಾಸ್ತು ಶಿಲ್ಪಿ ಶುಲ್ಕದ ಪಾವತಿಯ ಬಗ್ಗೆ.

ನಿರ್ಣಯ: ವಿಸ್ತೃತ ಚರ್ಚೆಯ ಅಗತ್ಯವಿರುವುದರಿಂದ ಕಾರ್ಯಸೂಚಿಯನ್ನು ಮುಂದಿನ ಸಭೆಗೆ ಮಂಡಿಸಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:ಇಡಿ: ಸಾ.ಸ.2:15(2022)**

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದಿಂದ ನಿರ್ವಹಿಸಲ್ಪಡುವ ರೂ.5.00 ಲಕ್ಷ ಮೀರದಂತಹ ಕಾಮಗಾರಿಗಳಿಗೆ ಇ–ಪ್ರೋಕ್ಯೂರ್‌ಮೆಂಟ್ ಮೂಲಕ ಟೆಂಡರುಕರೆಯುವ ಬಗ್ಗೆ ವಿನಾಯಿತಿ ನೀಡುವಕುರಿತು.

ನಿರ್ಣಯ: ವಿಸ್ತೃತ ಚರ್ಚೆಯ ಅಗತ್ಯವಿರುವುದರಿಂದ ಕಾರ್ಯಸೂಚಿಯನ್ನು ಮುಂದಿನ ಸಭೆಗೆ ಮಂಡಿಸಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:ಇಡಿ: ಸಾ.ಸ.2:16(2022)**

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯ ಆವರಣದಲ್ಲಿ ಶ್ರೀ ನಾರಾಯಣ ಗುರು ಅಧ್ಯಯನ ಪೀಠ ಕಟ್ಟಡದ ನಿರ್ಮಾಣ ಕಾಮಗಾರಿ ಮಾನ್ಯ ಸಂಸದರಾದ ಶ್ರೀ ನಳಿನ್ ಕುಮಾರ್ ಕಟೀಲ್ ದಕ್ಷಿಣಕನ್ನಡ ಜಿಲ್ಲೆ ಇವರ ಅನುದಾನ.

ಅಂದಾಜು ಮೊತ್ತ ರೂ.10.00 ಲಕ್ಷಗಳು

ನಿರ್ಣಯ: ವಿಸ್ತೃತ ಚರ್ಚೆಯ ಅಗತ್ಯವಿರುವುದರಿಂದ ಕಾರ್ಯಸೂಚಿಯನ್ನು ಮುಂದಿನ ಸಭೆಗೆ ಮಂಡಿಸಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:ಇಡಿ: ಸಾ.ಸ.2:17(2022)**

ವಿಷಯ: Construction of Ladies Hostel for SC/ST Students under AICTE-CAFES Scheme at Mangalore University Campus Mangalagangothri – ಟೆಂಡರ್ ಅಂಗೀಕರಿಸುವ ಬಗ್ಗೆ.

ನಿರ್ಣಯ: ವಿಸ್ತೃತ ಚರ್ಚೆಯ ಅಗತ್ಯವಿರುವುದರಿಂದ ಕಾರ್ಯಸೂಚಿಯನ್ನು ಮುಂದಿನ ಸಭೆಗೆ ಮಂಡಿಸಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:ಇಡಿ:ಸಾ.ಸ.2:18 (2022)**

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ವತಿಯಿಂದ ಕೋಣಾಜೆ ಪೋಲೀಸ್ ಠಾಣೆಗೆ ಕುಡಿಯುವ ನೀರು ಸರಬರಾಜು ಮಾಡುವ ಬಗ್ಗೆ.

ನಿರ್ಣಯ: ವಿಸ್ತೃತ ಚರ್ಚೆಯ ಅಗತ್ಯವಿರುವುದರಿಂದ ಕಾರ್ಯಸೂಚಿಯನ್ನು ಮುಂದಿನ ಸಭೆಗೆ ಮಂಡಿಸಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:ಡಿಇವಿ:ಸಾ.ಸ.2:19 (2022)**

ವಿಷಯ: 2019–20ನೇ ಸಾಲಿನ ಪಂಚಾಯತ್ ತೆರಿಗೆಯಲ್ಲಿ ಬಾಕಿಯಿರುವ ತೆರಿಗೆ ಪಾವತಿಸುವ ಕುರಿತು.

ನಿರ್ಣಯ: ವಿಸ್ತೃತ ಚರ್ಚೆಯ ಅಗತ್ಯವಿರುವುದರಿಂದ ಕಾರ್ಯಸೂಚಿಯನ್ನು ಮುಂದಿನ ಸಭೆಗೆ ಮಂಡಿಸಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:ಸಾರ್ವತ್ರಿಕ : ಸಾ.ಸ.2:20 (2022)**

ವಿಷಯ: 2020–21ನೇ ಸಾಲಿಗೆ ಮಂಗಳೂರು ವಿಶ್ವವಿದ್ಯಾನಿಲಯದ ಅಂತರ್ ಕಾಲೇಜು ಕ್ರೀಡಾ ಚಟುವಟಿಕೆಗಳಿಗೆ ಪದಕ ಖರೀದಿಸುವ ಕುರಿತು

ನಿರ್ಣಯ: ವಿಸ್ತೃತ ಚರ್ಚೆಯ ಅಗತ್ಯವಿರುವುದರಿಂದ ಕಾರ್ಯಸೂಚಿಯನ್ನು ಮುಂದಿನ ಸಭೆಗೆ ಮಂಡಿಸಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:ಸಾರ್ವತ್ರಿಕ: ಸಾ.ಸ.2:21 (2022)**

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಮಂಗಳ ಯೋಜನೆಯಡಿ ಹೆಚ್ಚುವರಿಯಾಗಿ ಎರಡು ಗ್ರಾಮಗಳನ್ನು ದತ್ತು ತೆಗೆದುಕೊಳ್ಳುವ ಬಗ್ಗೆ.

ನಿರ್ಣಯ: ವಿಸ್ತೃತ ಚರ್ಚೆಯ ಅಗತ್ಯವಿರುವುದರಿಂದ ಕಾರ್ಯಸೂಚಿಯನ್ನು ಮುಂದಿನ ಸಭೆಗೆ ಮಂಡಿಸಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:ಸಿಬ್ಬಂದಿ ಸಾ.ಸ:2:22(2022)**

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ತಾತ್ಕಾಲಿಕ ನೆಲೆಯಲ್ಲಿ ಸೇವೆ ಸಲ್ಲಿಸಿ ಖಾಯಂಗೊಂಡಿರುವ 17 ಮಂದಿ ಬೋಧಕೇತರ ಸಿಬ್ಬಂದಿಗಳಿಗೆ 2010ರ ಅನುಷ್ಠಾನಗೊಳಿಸುವ ಬಗ್ಗೆ.

ನಿರ್ಣಯ: ಪ್ರಸ್ತಾವನೆಯನ್ನು ಕೂಲಂಕಷವಾಗಿ ಚರ್ಚಿಸಲಾಯಿತು. ಸಿಬ್ಬಂದಿಗಳ ಖಾಯಂ ಪೂರ್ವದ ಸೇವೆಯನ್ನು ಸೂಪರ್‌ನ್ಯೂಮರರಿಯಾಗಿ ಸೇವಾಹಿರಿತನ, ಮುಂಭಡ್ತಿಯನ್ನು ಪರಿನಿಯಮ ರಚಿಸಿ ನಿಯಮಾನುಸಾರ ನೀಡಲು ಕ್ರಮ ಕೈಗೊಳ್ಳಬಹುದೆಂಬುದಾಗಿ ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:ಸಿಬ್ಬಂದಿ ಸಾ.ಸ.2:23 (2022)**

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ತಾತ್ಕಾಲಿಕ ನೆಲೆಯಲ್ಲಿ ಸೇವೆಗೈದು ನೇರ ನೇಮಕಾತಿಯಡಿ ನೇಮಕಗೊಂಡ/ಖಾಯಂ ಸೇವೆಗೆ ವಿಲೀನಗೊಳಿಸಲಾದ ಸಿಬ್ಬಂದಿಗಳ ಖಾಯಂಪೂರ್ವದ ಸೇವಾವಧಿಯನ್ನು ವೇತನ ಭಡ್ತಿ,ರಜೆ ಪಿಂಚಣಿ/ಉಪದಾನಇತ್ಯಾದಿ ಸೌಲಭ್ಯಗಳಿಗೆ ಪರಿಗಣಿಸುವ ಬಗ್ಗೆ.

ನಿರ್ಣಯ: ಪ್ರಸ್ತಾವನೆಯನ್ನು ಪರಿಶೀಲಿಸಲಾಯಿತು. ವಿಶ್ವವಿದ್ಯಾನಿಲಯದಲ್ಲಿ ತಾತ್ಕಾಲಿಕ ನೆಲೆಯಲ್ಲಿ ಸೇವೆಗೈದು ನೇರ ನೇಮಕಾತಿಯಡಿ ನೇಮಕಗೊಂಡ/ಖಾಯಂ ಸೇವೆಗೆ ವಿಲೀನಗೊಳಿಸಲಾದ ಸಿಬ್ಬಂದಿಗಳಿಗೆಲ್ಲರಿಗೂ ಅನ್ವಯವಾಗುವಂತೆ ಡಾ. ಎಂ.ಎಸ್. ತಳವಾರ, ಮಾನ್ಯ ಸಿಂಡಿಕೇಟು ಸದಸ್ಯರು ಇವರ ಅಧ್ಯಕ್ಷತೆಯಲ್ಲಿ ಏಕ ಸದಸ್ಯ ಸಮಿತಿಯನ್ನು ರಚಿಸಿಕೊಂಡು, ಎಲ್ಲಾ ಪ್ರಕರಣಗಳನ್ನು ಪರಿಶೀಲಿಸಿ ನಿಯಮಾನುಸಾರ ಕ್ರಮಕೈಗೊಂಡು ನಂತರ ಸಿಂಡಿಕೇಟು ಸಭೆಗೆ ಕಾರ್ಯಸೂಚಿ ಮಂಡಿಸಬಹುದೆಂಬುದಾಗಿ ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:ಸಿಬ್ಬಂದಿ: ಸಾ.ಸ.2:24 (2022)**

ವಿಷಯ: ಮೂಡಬಿದಿರೆತಾಲೂಕಿನ ಬನ್ನಡ್ಕದಲ್ಲಿ ವಿಶ್ವವಿದ್ಯಾನಿಲಯ ಪ್ರಥಮ ದರ್ಜೆ ಕಾಲೇಜು ಪ್ರಾರಂಭಿಸುವ ಬಗ್ಗೆ ರಚಿಸಿದ ಕರಡು ಅನುಶಾಸನದ ಅನುಮೋದನೆ ಬಗ್ಗೆ.

ನಿರ್ಣಯ: ಹಣಕಾಸು ಸಮಿತಿ ಸಭೆಯ ಶಿಫಾರಸ್ಸಿನಂತೆ ಕರಡು ಪರಿನಿಯಮದಲ್ಲಿ ನಮೂದಿಸಲಾದ **ಬ್ಲಾಕ್ ಗ್ರಾಂಟ್** ಅನ್ನು **ಆಂತರಿಕ ಸಂಪನ್ಮೂಲ** ಎಂಬುದಾಗಿ ತಿದ್ದುಪಡಿಗೊಳಿಸಿ ಕರಡು ಪರಿನಿಯಮವನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:ಸಿಬ್ಬಂದಿ: ಸಾ.ಸ.2:25(2022)**

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ಆವರಣದಲ್ಲಿ ಅಳವಡಿಸಲಾಗಿರುವ ಸಿ.ಸಿ.ಟಿ.ವಿ., ಬಯೋಮೆಟ್ರಿಕ್ಸ್ ಹಾಗೂ ಸೋಲಾರ್ ಉಪಕರಣಗಳ ಪ್ರಕ್ರಿಯೆ ಮತ್ತು ಕಾರ್ಯಕ್ಷಮತೆಯ ವೈಫಲ್ಯತೆ ಬಗ್ಗೆ ಶಿಸ್ತು ಕ್ರಮಕೈಗೊಳ್ಳುವ ಕುರಿತು.

ನಿರ್ಣಯ: ವಿಸ್ತೃತ ಚರ್ಚೆಯ ಅಗತ್ಯವಿರುವುದರಿಂದ ಸಿಂಡಿಕೇಟಿನ ವಿಶೇಷ ಸಭೆಗೆ ಮಂಡಿಸಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:ಪರೀಕ್ಷಾಂಗ: ಸಾ.ಸ.2:26(2022)**

ವಿಷಯ: ಪ್ರೊ.ಪೌಲ್‌ಜಿ.ಆಕ್ವಿನಸ್, ಅಧ್ಯಕ್ಷರು, ಸ್ನಾತಕೋತ್ತರ ಸಮಾಜಕಾರ್ಯ ವಿಭಾಗ ಮಂಗಳೂರು ವಿಶ್ವವಿದ್ಯಾನಿಲಯ ಇವರ ವಿರುದ್ಧ ಸ್ವೀಕೃತವಾಗಿರುವ ದೂರುಗಳ ಬಗ್ಗೆ ಸದರಿಯವರ ಸಮಜಾಯಿಷಿಕೆಗೆ ಸಿಂಡಿಕೇಟು ಸಭೆಯ ನಿರ್ಣಯ–ಪ್ರೊ.ಪೌಲ್.ಜಿ.ಆಕ್ವಿನಸ್ ಅವರ ಪ್ರತಿಕ್ರಿಯೆ.

ನಿರ್ಣಯ: ಸದರಿ ವಿಷಯಕ್ಕೆ ಸಂಬಂಧಿಸಿ ಸೂಕ್ತ ಕ್ರಮಕೈಗೊಳ್ಳಲು ಮಾನ್ಯ ಕುಲಪತಿಯವರಿಗೆ ಅಧಿಕಾರ ನೀಡಲಾಯಿತು.

**ಕಾರ್ಯಸೂಚಿ ಸಂಖ್ಯೆ:ಕಾನೂನು ಘಟಕ:ಸಾ.ಸ.2:27 (2022)**

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಸಂಯೋಜನೆ ಹೊಂದಿರುವ ವಿವಿಧ ಸರಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಅತಿಥಿ ಉಪನ್ಯಾಸಕರಾಗಿ ಕರ್ತವ್ಯ ನಿರ್ವಹಿಸುತ್ತಿರುವರು ಎನ್ನಲಾಗಿರುವ ಶ್ರೀ ಚಂದ್ರ ಹಾಗೂ ಇತರ ಇಪ್ಪತ್ತೈದು ಮಂದಿ ತಮ್ಮ ಸೇವಾ ಖಾಯಂಮಾತಿ ಕೋರಿ ಕರ್ನಾಟಕ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಹೂಡಿರುವ ರಿಟ್ ಅರ್ಜಿ ಸಂಖ್ಯೆ:3412/2021 (ಎಸ್)ಗೆ ಸಂಬಂಧಿಸಿದ ಆಕ್ಷೇಪಣಾ ಹೇಳಿಕೆಗಳ ಅನುಮೋದನೆ ಬಗ್ಗೆ.

ನಿರ್ಣಯ: ನಿಯಮಾನುಸಾರ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:ಕಾನೂನು ಘಟಕ:ಸಾ.ಸ.2:28 (2022)**

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಸಂಯೋಜನೆ ಹೊಂದಿರುವ ಸರಕಾರಿ ಪ್ರಥಮ ದರ್ಜೆ ಕಾಲೇಜು, ಕನ್ಯಾನ ಬಂಟ್ವಾಳ ತಾಲೂಕು ಇಲ್ಲಿ ಅತಿಥಿ ಉಪನ್ಯಾಸಕರಾಗಿ ಕರ್ತವ್ಯ ನಿರ್ವಹಿಸುತ್ತಿರುವರು ಎನ್ನಲಾಗಿರುವ ಶ್ರೀ ಸಂತೋಷ್ ಪಕ್ಕಳ ಎನ್.ಎಸ್. ಹಾಗೂ ಮತ್ತೊಬ್ಬರು ತಮ್ಮ ಸೇವಾ ಖಾಯಂಮಾತಿ ಕೋರಿ ಕರ್ನಾಟಕ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಹೂಡಿರುವ ರಿಟ್ ಅರ್ಜಿ ಸಂಖ್ಯೆ:15539/2021 (ಎಸ್.ಆರ್.ಇ.ಎಸ್)ಗೆ ಸಂಬಂಧಿಸಿದ ಆಕ್ಷೇಪಣಾ ಹೇಳಿಕೆಗಳ ಅನುಮೋದನೆ ಬಗ್ಗೆ.

ನಿರ್ಣಯ: ನಿಯಮಾನುಸಾರ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:ಕಾನೂನು ಘಟಕ:ಸಾ.ಸ.2:29 (2022)**

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಸಂಯೋಜನೆ ಹೊಂದಿರುವ ಸರಕಾರಿ ಪ್ರಥಮ ದರ್ಜೆ ಕಾಲೇಜು, ರಥ ಬೀದಿ, ಮಂಗಳೂರು ಇಲ್ಲಿ ಅತಿಥಿ ಉಪನ್ಯಾಸಕಿಯಗಿ ಕರ್ತವ್ಯ ನಿರ್ವಹಿಸುತ್ತಿರುವವರು ಎನ್ನಲಾಗಿರುವ ಶ್ರೀಮತಿ ಶಾಂತಾಜಾಧವ್ ಇವರು ತಮ್ಮ ಸೇವಾ ಖಾಯಂಮಾತಿ ಕೋರಿ ಕರ್ನಾಟಕ ರಾಜ್ಯ ಉಚ್ಛ ನ್ಯಾಯಾಲಯದಲ್ಲಿ ಹೂಡಿರುವ ರಿಟ್ ಅರ್ಜಿ ಸಂಖ್ಯೆ:17155/2021 (ಎಸ್.ಆರ್.ಇ.ಎಸ್.)ಗೆ ಸಂಬಂಧಿಸಿದ ಆಕ್ಷೇಪಣಾ ಹೇಳಿಕೆಗಳ ಅನುಮೋದನೆ ಬಗ್ಗೆ.

ನಿರ್ಣಯ: ನಿಯಮಾನುಸಾರ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:ಕಾನೂನು ಘಟಕ:ಸಾ.ಸ.2:30(2022)**

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯಕ್ಕೆ ಸಂಯೋಜನೆ ಹೊಂದಿರುವ ಸರಕಾರಿ ಪ್ರಥಮ ದರ್ಜೆ ಕಾಲೇಜು, ರಥ ಬೀದಿ, ಮಂಗಳೂರು ಇಲ್ಲಿ ಅತಿಥಿ ಉಪನ್ಯಾಸಕಿಯಾಗಿ ಕರ್ತವ್ಯ ನಿರ್ವಹಿಸುತ್ತಿರುವವರು ಎನ್ನಲಾಗಿರುವ ಶ್ರೀಮತಿ ಶಕುಂತಳಾ ಡಿ. ಇವರು ತಮ್ಮ ಸೇವಾ ಖಾಯಂಮಾತಿ ಕೋರಿ ಕರ್ನಾಟಕ ರಾಜ್ಯ ಉಚ್ಛ ನ್ಯಾಯಾಲಯದಲ್ಲಿ ಹೂಡಿರುವ ರಿಟ್ ಅರ್ಜಿ ಸಂಖ್ಯೆ:15545/2021 (ಎಸ್.ಆರ್.ಇ.ಎಸ್.)ಗೆ ಸಂಬಂಧಿಸಿದ ಆಕ್ಷೇಪಣಾ ಹೇಳಿಕೆಗಳ ಅನುಮೋದನೆ ಬಗ್ಗೆ.

ನಿರ್ಣಯ: ನಿಯಮಾನುಸಾರ ಪ್ರಸ್ತಾವನೆಯನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:ಸಿಬ್ಬಂದಿ:ಸಾ.ಸ.2:31(2022)**

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ಹಣಕಾಸು ಅಧಿಕಾರಿ ಹುದ್ದೆಯ ಪ್ರಭಾರವನ್ನು ವಹಿಸಿದ ಬಗ್ಗೆ.

ನಿರ್ಣಯ: ಪ್ರಸ್ತಾವನೆಯನ್ನು ಘಟನೋತ್ತರವಾಗಿ ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:ಸಿಬ್ಬಂದಿ:ಸಾ.ಸ.2:32(2022)**

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ಕುಲಸಚಿವರು ಹಾಗೂ ಕುಲಸಚಿವರು (ಪರೀಕ್ಷಾಂಗ) ಕಚೇರಿಗೆ ವಿಶೇಷಾಧಿಕಾರಿಯನ್ನು ನಿಯೋಜಿಸಿದ ಬಗ್ಗೆ

ನಿರ್ಣಯ: ಸದರಿ ಪ್ರಸ್ತಾವನೆಗೆ ಸಂಬಂಧಿಸಿ ಚರ್ಚಿಸಲಾಯಿತು. ಮಾನ್ಯ ಕುಲಪತಿಯವರು, ಕುಲಸಚಿವರು, ಕುಲಸಚಿವರು(ಪರೀಕ್ಷಾಂಗ), ಸುಗಮವಾದ ಆಡಳಿತ ಹಾಗೂ ತುರ್ತು ಕಾರಣಗಳಿಗಾಗಿ ಡಾ. ಯಶಸ್ವಿನಿ ಬಿ ಹಾಗೂ ಡಾ. ಮೋಹನ ಕೆ.ಎಸ್. ಸಹಾಯಕ ಪ್ರಾಧ್ಯಾಪಕರುಗಳನ್ನು ಆಡಳಿತ ಹಾಗೂ ಪರೀಕ್ಷಾಂಗ ವಿಭಾಗಕ್ಕೆ ವಿಶೇಷಾಧಿಕಾರಿಗಳಾಗಿ ಪಾಠ ಪ್ರವಚನಗಳನ್ನು ಮಾಡುವ ಷರತ್ತಿನೊಂದಿಗೆ ನೇಮಕ ಮಾಡಿರುವುದಾಗಿ ಸಿಂಡಿಕೇಟು ಸಭೆಗೆ ತಿಳಿಸಲಾಯಿತು.

ಸುದೀರ್ಘ ಚರ್ಚೆಯ ಬಳಿಕ ಸಭೆಯಲ್ಲಿ ಉಪಸ್ಥಿತರಿದ್ದ ಒಟ್ಟು ಸದಸ್ಯರ ಪೈಕಿ ಎಂಟು ಮಂದಿ ಸದಸ್ಯರು ನೇಮಕಾತಿಯ ಬಗ್ಗೆ ತಮ್ಮ ಅಸಮ್ಮತಿ (Dissent Note)ಯನ್ನು ಈ ಕೆಳಗಿನಂತೆ ಸೂಚಿಸಿದ್ದು, ಉಳಿದಂತೆ ಪ್ರಸ್ತಾವನೆಯನ್ನು ಘಟನೋತ್ತರವಾಗಿ ಅನುಮೋದಿಸಲಾಯಿತು.

**ಅಸಮ್ಮತಿ ಸೂಚಿಸಿದ ಸದಸ್ಯರುಗಳ ವಿವರ:**

1. ಪ್ರೊ.ಕರುಣಾಕರ್ ಎ.ಕೋಟೆಗಾರ್
2. ಶ್ರೀ ರವಿಚಂದ್ರ ಪಿ.ಎಂ.
3. ಡಾ.ಎಂ.ಎಸ್.ತಳವಾರ
4. ಶ್ರೀ ಕೆ. ರಮೇಶ
5. ಡಾ.ಪಾರ್ವತಿ ಅಪ್ಪಯ್ಯ
6. ಶ್ರೀ ಮೋಹನ್ ಪಡಿವಾಳ
7. ಶ್ರೀ ವಿವೇಕಾನಂದ ಪನಿಯಾಲ
8. ಶ್ರೀ ರವೀಂದ್ರನಾಥ ರೈ

**Dissent Note: Agenda No.SSA.2:32/2022 Meeting Date:28.02.2022**

The following signed syndicate members object for the appointment of Dr.Yashaswini .B. and Dr.Mohan K.S. as Special Officials and therefore record dissent for the following reasons for grounds.

1. The Registrar – Administrator any instance of emergency on extraordinary instances necessitating the appointment as special officers without the prior approval of the Syndicate. This is not a fit use for ratification ever on merit.
2. The Hon'ble of Karnataka has deprecated the practice of appointing the "teachers" for administrative or non-teaching posts [order dated 19.06.2017 in w.p.No.24645/2017 (S-RES)]
3. The appointment of these teachers in non-teaching job / role, the same will negatively impact teaching and research as students will suffer. The full time, permanent UGC pay scale teachers are expected to devote their quality time for Research and Teachings only, for this case their service is broadly needed in their respective departments.
4. Public interest and the interest of Mangalore University should be protected there is an actual shortage of UGC qualified full time teachers in Mangalore University. This will unnecessarily effect the exchequer of Mangalore University. This will make the University to higher more and more visiting faculty staff (Guest Lecturers). Hence, the ratification cannot be given.

**ಕಾರ್ಯಸೂಚಿ ಸಂಖ್ಯೆ:ಸಿಬ್ಬಂದಿ:ಸಾ.ಸ.2:33 (2022)**

ವಿಷಯ: ಡಾ. ಐರಾಣಿ ಮೊಹಮ್ಮದ್ ಖಾನ್, ಹಿಂದಿನ ಕುಲಸಚಿವರು ಹಾಗೂ ಪ್ರಾಧ್ಯಾಪಕರು, ಇಲೆಕ್ಟ್ರಾನಿಕ್ಸ್ ವಿಭಾಗ ಮಂಗಳೂರು ವಿಶ್ವವಿದ್ಯಾನಿಲಯ ಇವರ ಮೇಲಿನ ಕರ್ತವ್ಯ ಲೋಪದ ಆರೋಪದ ಬಗೆಗಿನ ಇಲಾಖಾ ವಿಚಾರಣೆಯ ವರದಿ ಕುರಿತು.

ನಿರ್ಣಯ: ವಿಸ್ತೃತ ಚರ್ಚೆಯ ಅಗತ್ಯವಿರುವುದರಿಂದ ಕಾರ್ಯಸೂಚಿಯನ್ನು ಮುಂದಿನ ಸಭೆಗೆ ಮಂಡಿಸಲು ನಿರ್ಣಯಿಸಲಾಯಿತು..

**ಕಾರ್ಯಸೂಚಿ ಸಂಖ್ಯೆ:ಡಿಇವಿ:ಸಾ.ಸ.2:34(2022)**

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ಸ್ನಾತಕೋತ್ತರ ತುಳು ಅಧ್ಯಯನ ವಿಭಾಗಕ್ಕೆ 'ಶ್ರೀ ಸಂಸ್ಥಾನ ಒಡಿಯೂರು ತುಳು ಅಧ್ಯಯನ ಕೇಂದ್ರ' ಎಂದು ನಾಮಕರಣ ಮಾಡುವ ಕುರಿತು ಮನವಿಯ ಬಗ್ಗೆ.

ನಿರ್ಣಯ: ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಲಾಯಿತು. ಸದರಿ ಪ್ರಸ್ತಾವನೆಗೆ ಸಂಬಂಧಿಸಿ ಕಾರ್ಯಸೂಚಿಯಲ್ಲಿ ನಮೂದಿಸಿದ ವಿಷಯಗಳನ್ನು ಪರಿಗಣಿಸಿಕೊಂಡು ಮಂಗಳೂರು ವಿಶ್ವವಿದ್ಯಾನಿಲಯ / ವಿಶ್ವವಿದ್ಯಾನಿಲಯ ಸಂಧ್ಯಾ ಕಾಲೇಜು, ಮಂಗಳೂರು ಇಲ್ಲಿ ಶ್ರೀ ಸಂಸ್ಥಾನ ಒಡಿಯೂರು ತುಳು ಅಧ್ಯಯನ ಕೇಂದ್ರವನ್ನು ಪ್ರತ್ಯೇಕವಾಗಿ ಪ್ರಾರಂಭಿಸಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:ಡಿಇವಿ:ಸಾ.ಸ.2:35(2022)**

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಸ್ಥಾಪಿಸಿರುವ ವಿವಿಧ ಕೇಂದ್ರ ಪೀಠಗಳ ಮತ್ತುಅಧ್ಯಯನ ಕೇಂದ್ರಗಳ ಪ್ರತೀ ತಿಂಗಳ ಕಾರ್ಯವೈಖರಿಯ ಮಾಹಿತಿ ನೀಡುವ ಬಗ್ಗೆ.

ನಿರ್ಣಯ: ವರದಿಯನ್ನು ಅವಗಾಹನೆಗೆ ತರಲಾಯಿತು.

**ಕಾರ್ಯಸೂಚಿ ಸಂಖ್ಯೆ:ಡಿಇವಿ:ಸಾ.ಸ.2:36(2022)**

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಸ್ಥಾಪಿಸಿರುವ ವಿವಿಧ ಅಧ್ಯಯನ ಕೇಂದ್ರ/ಪೀಠಗಳಲ್ಲಿ ಸೇವೆ ಸಲ್ಲಿಸುತ್ತಿರುವ ನಿರ್ದೇಶಕರು/ಸಂಯೋಜಕರುಗಳ ನೇಮಕಾತಿ.

ನಿರ್ಣಯ: ಕಾರ್ಯಸೂಚಿಯಲ್ಲಿ ನಮೂದಿಸಲಾದ ನಿರ್ದೇಶಕರು/ಸಂಯೋಜಕರುಗಳ ತಃಖ್ತೆಯ ಕ್ರಮ ಸಂಖ್ಯೆ.3, 7ರಿಂದ10, 12,14, 18ರಿಂದ22 ಮತ್ತು 24 ರಲ್ಲಿ ನಮೂದಿಸಿರುವ ಸಂಯೋಜಕರು/ನಿರ್ದೇಶಕರುಗಳನ್ನು ಮುಂದುವರಿಸಿಕೊಳ್ಳಲು ಹಾಗೂ ಕ್ರಮ ಸಂಖ್ಯೆ. 1,2,4,5,6,11,13,15ರಿಂದ17 ಮತ್ತು 23ರಲ್ಲಿ ಸೂಚಿಸಿದ ಸಂಯೋಜಕರು/ನಿರ್ದೇಶಕರುಗಳನ್ನು ನೇಮಿಸುವ ಅಧಿಕಾರವನ್ನು ಮಾನ್ಯ ಕುಲಪತಿಯವರಿಗೆ ನೀಡಲಾಯಿತು. ಕ್ರಮ ಸಂಖ್ಯೆ.4ರಲ್ಲಿನ ಪೀಠವನ್ನು ಎಫ್.ಎಂ.ಕೆ.ಎಂ.ಸಿ ಕಾಲೇಜು ಇಲ್ಲಿಗೆ ಸ್ಥಳಾಂತರಿಸಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:ಪರೀಕ್ಷಾಂಗ: ಸಾ.ಸ.2:37(2022)**

ವಿಷಯ: ಎಪ್ರಿಲ್/ಆಗಸ್ಟ್/ಅಕ್ಟೋಬರ್/ಡಿಸೆಂಬರ್ 2021ರಲ್ಲಿ ಜರುಗಿದ ವಿಶ್ವವಿದ್ಯಾನಿಲಯದ ವಿವಿಧ ಪದವಿ/ಸ್ನಾತಕೋತ್ತರ ಪರೀಕ್ಷೆಗಳಲ್ಲಿ ಪರೀಕ್ಷಾ ಅವ್ಯವಹಾರ ನಡೆಸಿದ ವಿದ್ಯಾರ್ಥಿಗಳ ಬಗ್ಗೆ ತನಿಖಾ ವರದಿ

ನಿರ್ಣಯ: ಪರೀಕ್ಷಾ ಅವ್ಯವಹಾರ ತನಿಖಾ ಸಮಿತಿಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:ಆಡಳಿತ:ಸಾ.ಸ.2:38(2022)**

ವಿಷಯ: ಸ್ನಾತಕೋತ್ತರ ಕೇಂದ್ರ ಚಿಕ್ಕ ಅಳುವಾರ ಇಲ್ಲಿಗೆ ಮರದ, ವಿದ್ಯಾರ್ಥಿ ಮೇಜು ಮತ್ತು ವಿದ್ಯಾರ್ಥಿ ಕುರ್ಚಿಗಳ ಖರೀದಿಗೆ ಮಂಜೂರಾತಿ ನೀಡುವ ಬಗ್ಗೆ.

ನಿರ್ಣಯ: ದಿನಾಂಕ 18.02.2022ರಂದು ನಡೆದ ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:ಆಡಳಿತ:ಸಾ.ಸ.2:39(2022)**

ವಿಷಯ: ಕಂಪ್ಯೂಟರ್ ಪ್ರಿಂಟರ್ ಟೋನರ್ ರೀಫಿಲ್ಲಿಂಗ್ ಹಾಗೂ ಡ್ರಮ್ ಬದಲಾವಣೆಯ ಧಾರಣಾಗುತ್ತಿಗೆ ದರ ಒಂದು ವರ್ಷದ ಅವಧಿಗೆ ನಿಗದಿ ಪಡಿಸುವ ಬಗ್ಗೆ.

ನಿರ್ಣಯ: ದಿನಾಂಕ 18.02.2022ರಂದು ನಡೆದ ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:ಡಿಇವಿ:ಸಾ.ಸ.2:40(2022)**

ವಿಷಯ: ಅಂತರಾಷ್ಟ್ರೀಯ ವಿದ್ಯಾರ್ಥಿಕೇಂದ್ರ–Venkat Residency ಇಲ್ಲಿನ Wi-fi ಸಂಪರ್ಕದ ಪ್ರಸ್ತಾವನೆ ಬಗ್ಗೆ.

ನಿರ್ಣಯ: ದಿನಾಂಕ 18.02.2022ರಂದು ನಡೆದ ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:ಡಿಇವಿ:ಸಾ.ಸ.2:41(2022)**

ವಿಷಯ: UGC Scheme for development of Sports Infrastructure Equipment in University during XII plan ಅಡಿಯಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ವಿಭಾಗದ ಒಳಾಂಗಣ ಕ್ರೀಡಾಂಗಣಕ್ಕೆ ಬಯೋಮೆಟ್ರಿಕ್ ಉಪಕರಣವನ್ನು ಖರೀದಿಸುವ ಪ್ರಸ್ತಾವನೆ ಬಗ್ಗೆ.

ನಿರ್ಣಯ: ದಿನಾಂಕ 18.02.2022ರಂದು ನಡೆದ ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:ಪ.ಜಾ.ಪ.ಪಂಗಡ ಘಟಕ:ಸಾ.ಸ.2:42(2022)**

ವಿಷಯ: ದಿನಾಂಕ 20.01.2022 ರಂದು ನಡೆದ ಪರಿಶಿಷ್ಟ ಜಾತಿ / ಪಂಗಡಗಳ ಸ್ಥಾಯಿ ಸಮಿತಿ ಸಭೆಯ ನಿರ್ಣಯಗಳನ್ನು ಅನುಷ್ಠಾನಗೊಳಿಸುವ ಬಗ್ಗೆ.

ನಿರ್ಣಯ: ಶಿಷ್ಯವೇತನದ ಮೊತ್ತವನ್ನು ಆರಂಭದ 2 ವರ್ಷಗಳವರೆಗೆ ರೂ.25,000/- ಹಾಗೂ ನಂತರದ 3 ವರ್ಷಗಳಿಗೆ ರೂ.30,000/- ಗಳಂತೆ ಪರಿಷ್ಕರಿಸಿಕೊಂಡು ಉಳಿದಂತೆ ದಿನಾಂಕ 20.01.2022 ರಂದು ನಡೆದ ಪರಿಶಿಷ್ಟ ಜಾತಿ / ಪಂಗಡಗಳ ಸ್ಥಾಯಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:ಪರೀಕ್ಷಾಂಗ:ಸಾ.ಸ.2:43 (2022)**

ವಿಷಯ: 2022ನೇ ವರ್ಷದಲ್ಲಿ ಪದವಿ ಹಾಗೂ ಸ್ನಾತಕೋತ್ತರ ಪದವಿಯ ಪರೀಕ್ಷೆಗಳನ್ನು ನಡೆಸಲುರಚನೆಯಾದ ಪರೀಕ್ಷಕರ ಮಂಡಳಿಯ ಅನುಮೋದನೆ ಕುರಿತು.

ನಿರ್ಣಯ: ಪರೀಕ್ಷಕರ ನೇಮಕಾತಿ ಮಂಡಳಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:ಕಾನೂನು ಘಟಕ:ಸಾ.ಸ.2:44(2022)**

ವಿಷಯ: ಡಾ.ಅರಬಿ ಯು ಪ್ರಾಧ್ಯಾಪಕರು, ಸ್ನಾತಕೋತ್ತರ ಅರ್ಥಶಾಸ್ತ್ರ ವಿಭಾಗಇವರು ಮಂಗಳೂರು ವಿಶ್ವವಿದ್ಯಾನಿಲಯದ ವಿರುದ್ಧ ಕರ್ನಾಟಕ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಹೂಡಿರುವ ನ್ಯಾಯಾಂಗ ನಿಂದನಾ ಅರ್ಜಿ ಸಂಖ್ಯೆ:1038/2021 ಸಂಬಂಧಿಸಿದಂತೆ ಪ್ರತಿವಾದಿಯಾದ ಕುಲಸಚಿವರ ಪರವಾಗಿ ನ್ಯಾಯವಾದಿ ಶ್ರೀ ಕೆ. ರವಿಶಂಕರ್ ಇವರ ನೇಮಕಾತಿಗೆ ಘಟನೋತ್ತರ ಅನುಮೋದನೆ ಹಾಗೂ ಇವರನ್ನು ನ್ಯಾಯವಾದಿಗಳ ಯಾದಿಗೆ ಸೇರಿಸುವ ಬಗ್ಗೆ.

ನಿರ್ಣಯ: ಪ್ರಸ್ತಾವನೆಯನ್ನು ಘಟನೋತ್ತರವಾಗಿ ಅನುಮೋದಿಸಲಾಯಿತು. ಮುಂದುವರಿದು, ಮಂಗಳೂರು ವಿಶ್ವವಿದ್ಯಾನಿಲಯದ ನ್ಯಾಯವಾದಿಗಳ ಯಾದಿಗೆ ಶ್ರೀ ಕೆ. ರವಿಶಂಕರ್ ಇವರನ್ನು ಸೇರಿಸಿಕೊಳ್ಳಲು ಸೂಕ್ತ ಕ್ರಮಕೈಗೊಳ್ಳಬಹುದೆಂಬುದಾಗಿ ಹಾಗೂ ಸದರಿ ಪ್ರಕರಣಕ್ಕೆ ಸಂಬಂಧಿಸಿ ತಗಲುವ ವೆಚ್ಚವನ್ನು ವಿಶ್ವವಿದ್ಯಾನಿಲಯದಿಂದಲೇ ಭರಿಸಬೇಕಾಗಿ ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:ಕಾನೂನು ಘಟಕ:ಸಾ.ಸ.2:45(2022)**

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ಮಾನವ ಪ್ರಜ್ಞೆ ಹಾಗೂ ಯೋಗ ವಿಜ್ಞಾನ ವಿಭಾಗದಡಿ ಪಿ.ಹೆಚ್.ಡಿ ಪ್ರೋಗ್ರಾಂಗೆ 2020-21ರಲ್ಲಿ ಅಧಿಸೂಚಿಸಲಾಗಿದ್ದ ಸೀಟುಗಳಲ್ಲಿ ಪರಿಶಿಷ್ಟ ಪಂಗಡದ (ST) ಅಭ್ಯರ್ಥಿಗೆ ಮೀಸಲಿಟ್ಟಿದ್ದ 01 ಖಾಲಿ ಸೀಟಿಗೆದುರಾಗಿ ತಮಗೆ ಪಿ.ಹೆಚ್.ಡಿ. ಮಾಡಲು ಅನುಮತಿ ನೀಡುವಂತೆ ಕರ್ನಾಟಕ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಶ್ರೀ ಶಂಕರ ಇವರು ಮಂಗಳೂರು ವಿಶ್ವವಿದ್ಯಾನಿಲಯದ ವಿರುದ್ಧ ಹೂಡಿರುವ ರಿಟ್ ಪಿಟಿಷನ್ ಸಂಖ್ಯೆ:24362/2021ಗೆ ಸಂಬಂಧಿಸಿದಂತೆ ನ್ಯಾಯಾಲಯದಲ್ಲಿ ಹೂಡಲಾಗಿರುವ ಆಕ್ಷೇಪಣಾ ಹೇಳಿಕೆಗಳ ಘಟನೋತ್ತರ ಅನುಮೋದನೆ ಬಗ್ಗೆ.

ನಿರ್ಣಯ: ಪ್ರಸ್ತಾವನೆಯನ್ನು ಘಟನೋತ್ತರವಾಗಿ ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:ಡಿಇವಿ:ಸಾ.ಸ.2:46(2022)**

ವಿಷಯ: SERB ಪ್ರಾಜೆಕ್ಟ್, ವಸ್ತು ವಿಜ್ಞಾನ ವಿಭಾಗ–ಉಪಕರಣಖರೀದಿ ಬಗ್ಗೆ.

ನಿರ್ಣಯ: ದಿನಾಂಕ 18.02.2022 ರಂದು ನಡೆದ ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:ಡಿಇವಿ:ಸಾ.ಸ.2:47(2022)**

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ವಿವಿಧ ಸ್ನಾತಕೋತ್ತರ ವಿಭಾಗ/ಕೋರ್ಸುಗಳಿಗೆ Adjunct Facultyಗಳ ನೇಮಕಾತಿ ಬಗ್ಗೆ.

ನಿರ್ಣಯ: ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಲಾಯಿತು. ವಿಶ್ವವಿದ್ಯಾನಿಲಯದಲ್ಲಿ Adjunct Facultyಗಳಿಗೆ ಸಂಬಂಧಿಸಿ ನೀಡಲಾಗಿರುವ ಮತ್ತು ಪ್ರಸ್ತುತ ನೀಡಲಾಗುವ ಸಂಭಾವನೆ, ಬೋಧನಾವಧಿಗಳ ವಿವರ, ಮತ್ತು Adjunct Faculty ಗಳು ತರಗತಿಗಳನ್ನು ನಡೆಸಿದ (ವರ್ಚುವಲ್) ಬಗ್ಗೆ ದಾಖಲೆ/ ವಿವರಗಳ ಸಮಗ್ರ ಮಾಹಿತಿಗಳೊಂದಿಗೆ ಮುಂದಿನ ಸಿಂಡಿಕೇಟು ಸಭೆಗೆ ಮಂಡಿಸಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:ಡಿಇವಿ:ಸಾ.ಸ.2:48 (2022)**

ವಿಷಯ: ಡಿಎಸ್‌ಟಿ ಪ್ರಯೋಗಾಲಯದಲ್ಲಿರುವ Field Emission Scanning Electron Microscope (FESEM) ಉಪಕರಣಕ್ಕೆ Filament ಖರೀದಿಸುವ ಪ್ರಸ್ತಾವನೆ ಬಗ್ಗೆ.

ನಿರ್ಣಯ: ದಿನಾಂಕ 18.02.2022 ರಂದು ನಡೆದ ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:ಡಿಇವಿ:ಸಾ.ಸ.2:49 (2022)**

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ IBM Incubation Centreನ್ನು ಮೇಲ್ದರ್ಜೆಗೇರಿಸಲು ಮೆ.ಕಿಯೋನಿಕ್ಸ್ ಸಂಸ್ಥೆ, ಬೆಂಗಳೂರು ಇವರಿಂದ ಉಪಕರಣಗಳನ್ನು ಖರೀದಿಸಿರುವ ಬಗ್ಗೆ.

ನಿರ್ಣಯ: ಸದರಿ ಉಪಕರಣದ ಕಾರ್ಯಕ್ಷಮತೆಯ ಬಗ್ಗೆ ಪ್ರೊ.ಶಶಿರೇಖಾ, ಪ್ರಾಧ್ಯಾಪಕರು, ಗಣಕ ವಿಜ್ಞಾನ ವಿಭಾಗ ಮತ್ತು ನಿರ್ದೇಶಕರು, ಗಣಕಯಂತ್ರ ಕೇಂದ್ರ, ಮಂಗಳೂರು ವಿಶ್ವವಿದ್ಯಾನಿಲಯ ಇವರಿಂದ ಕಾರ್ಯಕ್ಷಮತೆ ಬಗ್ಗೆ ತಾಂತ್ರಿಕ ವರದಿಯನ್ನು ಪಡೆದುಕೊಂಡು ವಿಶ್ವವಿದ್ಯಾನಿಲಯದ ಆರ್ಥಿಕ ವ್ಯವಸ್ಥೆಗನುಗುಣವಾಗಿ ಎರಡು ತಿಂಗಳ ಕಾಲಾವಧಿಯಲ್ಲಿ ಮೂರು ಕಂತುಗಳಲ್ಲಿ ಪಾವತಿಸಬಹುದೆಂಬುದಾಗಿ ನಿರ್ಣಯಿಸಲಾಯಿತು.

ಸಿಂಡಿಕೇಟಿನ ಮಾನ್ಯ ಸದಸ್ಯರಾದ ಪ್ರೊ.ಕರುಣಾಕರ್ ಕೋಟೆಗಾರ್ ಇವರು ತಮ್ಮ ಅಸಮ್ಮತಿ (Dissent Note)ಯನ್ನು ಈ ಕೆಳಗಿನಂತೆ ಸೂಚಿಸಿದರು.

Kindly note my dissent note for the Agenda 2:49 (2022) for the following reasons;

It seems to be a clear violation of the KTPP Act 1999 during the process of procurement. I have not received satisfactory answer for the following questions.

What was the necessity of dividing the planned Data Centre project into different modules and sending a separate work orders to KEONICS?

Why did the University has not taken Government permission before finalizing tender work that is more than Rs.1 crore?

**ಕಾರ್ಯಸೂಚಿ ಸಂಖ್ಯೆ:ಸಾರ್ವತ್ರಿಕ:ಸಾ.ಸ.2:50(2022)**

ವಿಷಯ: ಡಾ.ಉಮೇಶ್ ನಾಯ್ಕ್, ಸಹಾಯಕ ಪ್ರಾಧ್ಯಾಪಕರು, ಗ್ರಂಥಾಲಯ ಹಾಗೂ ಮಾಹಿತಿ ವಿಜ್ಞಾನ ವಿಭಾಗ, ಮಂಗಳೂರು ವಿಶ್ವವಿದ್ಯಾನಿಲಯ ಇವರ ವಿರುದ್ಧ ವಿಭಾಗದ ವಿದ್ಯಾರ್ಥಿನಿಯರು ನೀಡಿರುವ ದೂರಿನ ಬಗ್ಗೆ.

ನಿರ್ಣಯ: ವಿಸ್ತೃತ ಚರ್ಚೆಯ ಅಗತ್ಯವಿರುವುದರಿಂದ ಮುಂದಿನ ಸಭೆಗೆ ಮಂಡಿಸಲು ನಿರ್ಣಯಿಸಲಾಯಿತು

**ಕಾರ್ಯಸೂಚಿ ಸಂಖ್ಯೆ:ಕಾನೂನು ಘಟಕ:ಸಾ.ಸ.2:51(2022)**

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ ನ್ಯಾಯವಾದಿಗಳ ಯಾದಿಗೆ ವಿ.ತಿಪ್ಪೇಸ್ವಾಮಿ, ನ್ಯಾಯವಾದಿ ಬೆಂಗಳೂರು ಇವರನ್ನು ಸೇರಿಸುವ ಬಗ್ಗೆ.

ನಿರ್ಣಯ: ವಿಸ್ತೃತ ಚರ್ಚೆಯ ಅಗತ್ಯವಿರುವುದರಿಂದ ಮುಂದಿನ ಸಭೆಗೆ ಮಂಡಿಸಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:ಸಿಬ್ಬಂದಿ:ಸಾ.ಸ.2:52(2022)**

ವಿಷಯ: ಶ್ರೀ ವೈ.ರವಿಕಾಂತ್ ಭಟ್, ಇವರು ಕೆ.ಸಿ.ಎಸ್.ಆರ್. ನಿಯಮ 285(2)ರಂತೆ ನಿವೃತ್ತಿ ಪಿಂಚಣಿಯನ್ನು ಮಂಜೂರು ಮಾಡಲು ಸಲ್ಲಿಸಿರುವ ಮನವಿ ಕುರಿತು.

ನಿರ್ಣಯ: ವಿಸ್ತೃತ ಚರ್ಚೆಯ ಅಗತ್ಯವಿರುವುದರಿಂದ ಮುಂದಿನ ಸಭೆಗೆ ಮಂಡಿಸಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:ಡಿಇವಿ:ಸಾ.ಸ.2:53(2022)**

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ Skill Development ಯೋಜನೆಯನ್ನು ಕಾರ್ಯಗತಗೊಳಿಸಲು M/s. Cadmaxx Solutions Private Ltd., Bangalore ಇವರ ಸೇವೆಯನ್ನು ಬಳಸಿಕೊಳ್ಳುವ ಬಗ್ಗೆ.

ನಿರ್ಣಯ: ಸಂಸ್ಥೆಯವರು ತಯಾರಿಸಿರುವ ಒಡಂಬಡಿಕೆಯನ್ನು ಪರಿಶೀಲಿಸಲಾಗಿ ಒಡಂಬಡಿಕೆಯಲ್ಲಿ ಕಂಡುಬಂದಿರುವ ನ್ಯೂನತೆಗಳನ್ನು ಸರಿಪಡಿಸಿ ಪುನರ್ ರಚಿಸಿಕೊಂಡು ಮುಂದಿನ ಸಭೆಗೆ ಮಂಡಿಸಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:ಸಾರ್ವತ್ರಿಕ:ಸಾ.ಸ.2:54(2022)**

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದ 2020–21ನೇ ಸಾಲಿನ ವಾರ್ಷಿಕ ವರದಿಯನ್ನು ಆಂಗ್ಲ ಮತ್ತು ಕನ್ನಡ ಆವೃತ್ತಿಯಲ್ಲಿ ಮುದ್ರಿಸಿ ಸಿ.ಡಿ.ಯಲ್ಲಿ ಅಳವಡಿಸಿ ಸರಬರಾಜು ಮಾಡುವ ದರಪಟ್ಟಿಗೆ ಮಂಜೂರಾತಿ ನೀಡುವ ಕುರಿತು.

ನಿರ್ಣಯ: ದಿನಾಂಕ 18.02.2022 ರಂದು ನಡೆದ ಖರೀದಿ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:ಸಿಬ್ಬಂದಿ:ಸಾ.ಸ.2:55(2022)**

ವಿಷಯ: ಡಾ.ಅರಬಿ ಯು, ಪ್ರಾಧ್ಯಾಪಕರು, ಅರ್ಥಶಾಸ್ತ್ರ ವಿಭಾಗಇವರಿಗೆ ಸೇವಾ ಸವಲತ್ತುಗಳನ್ನು ವಿಸ್ತರಿಸಿರುವ ಹಾಗೂ ಇಲಾಖಾ ವಿಚಾರಣೆ ನಡೆಸಲು ಕ್ರಮಕೈಗೊಂಡ ಬಗ್ಗೆ –ಘಟನೋತ್ತರ ಅನುಮೋದನೆ ಕುರಿತು.

ನಿರ್ಣಯ: ಡಾ. ಅರಬಿ.ಯು ಕೇಸಿಗೆ ಸಂಬಂಧಿಸಿದ ಮಾನ್ಯ ಉಚ್ಚ ನ್ಯಾಯಾಲಯದ ದಿನಾಂಕ 20.07.2021ರಂದು ನೀಡಿದ ತೀರ್ಪಿನ ಮೇಲೆ ನ್ಯಾಯಾಲಯಕ್ಕೆ ಅಪೀಲ್ ಮಾಡಲು ದಿನಾಂಕ 23.07.2021ರಂದು ನಡೆದ ಸಿಂಡಿಕೇಟ್ ಸಭೆಯಲ್ಲಿ ನಿರ್ಣಯಿಸಲಾಗಿತ್ತು. ಅಪೀಲ್ ಮಾಡಿ ತಿಂಗಳುಗಳಾದರೂ ಸದರಿ ಕೇಸಿಗೆ ನ್ಯಾಯಾಲಯ ಈವರೆಗೆ ತಡೆಯಾಜ್ಞೆ ನೀಡಿರುವುದಿಲ್ಲ ,ಈ ಮಧ್ಯೆ ಡಾ ಅರಬಿ. ಯು ಇವರು ನ್ಯಾಯಂಗ ನಿಂದನಾ ಅರ್ಜಿ (ಸಂಖ್ಯೆ 1038/2021)ಯನ್ನು ಸಲ್ಲಿಸಿದ್ದು, ರಿಟ್ ಅರ್ಜಿ ಸಂಖ್ಯೆ 15070/2020ರಲ್ಲಿ ದಿನಾಂಕ 20.07.2021 ಮಾನ್ಯ ಉಚ್ಛ ನ್ಯಾಯಲಯವು ಮಾಡಿದ ಆದೇಶವನ್ನು ಅನುಷ್ಟಾನಗೊಳಿಸದೇ ಇದ್ದುದರಿಂದ, ನ್ಯಾಯಲಯವು ಕುಲಸಚಿವರ ಹಾಗೂ ಆಗಿನ ಸ್ಪರ್ಷ ಸಮಿತಿಯ ಅಧ್ಯಕ್ಷರ ವಿರುದ್ಧ ವೈಯುಕ್ತಿಕ ಹೆಸರಲ್ಲಿ ನ್ಯಾಯಾಂಗ

ನಿಂದನೆಯ ಆದೇಶ ಮಾಡಿರುತ್ತದೆ. ಆದುದರಿಂದ ಮಾನ್ಯ ಕುಲಪತಿಯವರ ಅನುಮತಿಯ ಮೇರೆಗೆ ಸದರಿ ಸವಲತ್ತುಗಳನ್ನು ಮತ್ತು ವಿಚಾರಣೆ ನಡೆಸಲು ಆದೇಶ ನೀಡಲಾಯಿತು ಎಂದು ತಿಳಿಸಿದರು.ಇದರ ಬಗ್ಗೆ ಅರುಣ್ ಶ್ಯಾಮ್ ಅಸೋಸಿಯೇಟ್ಸ್ ಇವರಲ್ಲಿ ಸದರಿಯವರಿಗೆ ಸವಲತ್ತುಗಳನ್ನು ವಿಸ್ತರಿಸಿದ ಬಗ್ಗೆ ಹಾಗೂ ಇಲಾಖಾ ವಿಚಾರಣೆಯನ್ನು ನಡೆಸುವ ಅಗತ್ಯತೆಯ ಬಗ್ಗೆ ಮಾಹಿತಿಯನ್ನು ಪಡೆದು ಮುಂದಿನ ಸಿಂಡಿಕೇಟ್ ಸಭೆಗೆ ಮಂಡಿಸಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:ಸಿಬ್ಬಂದಿ:ಸಾ.ಸ.2:56(2022)**

ವಿಷಯ: ಡಾ.ಅಣ್ಣಯ್ಯ ರಮೇಶ್, ಸಹಾಯಕ ಪ್ರಾಧ್ಯಾಪಕರು, ಅನ್ವಯಿಕ ಸಸ್ಯಶಾಸ್ತ್ರ ವಿಭಾಗ ಮಂಗಳೂರು ವಿಶ್ವವಿದ್ಯಾನಿಲಯ ಇವರ ಮೇಲಿನ ಆರೋಪಗಳ ಬಗ್ಗೆ ಇಲಾಖಾ ವಿಚಾರಣೆ ಕುರಿತು.

ನಿರ್ಣಯ: ವಿಸ್ತೃತ ಚರ್ಚೆಯ ಅಗತ್ಯವಿರುವುದರಿಂದ ಮುಂದಿನ ಸಭೆಗೆ ಮಂಡಿಸಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:ಸಿಬ್ಬಂದಿ:ಸಾ.ಸ.2:57 (2022)**

ವಿಷಯ: ಡಾ.ಶಾಮ ಸುಂದರ್.ಜೆ., ಸಹಾಯಕ ಪ್ರಾಧ್ಯಾಪಕರು ಇವರ ಮೇಲಿನ ಇಲಾಖಾ ವಿಚಾರಣೆ–ದಂಡನೆ ಆದೇಶವನ್ನು ಪುನರ್ ಪರಿಶೀಲಿಸಿ ದೋಷ ಮುಕ್ತಗೊಳಿಸುವಂತೆ ಹಾಗೂ ತಡೆಹಿಡಿಯಲಾದ ವೇತನ ಬಡ್ತಿ ಹಾಗೂ ವೇತನ ಬಾಕಿ ಮೊತ್ತವನ್ನು ನೀಡುವಂತೆ ಸಲ್ಲಿಸಿರುವ ಮನವಿಯ ಬಗ್ಗೆ.

ನಿರ್ಣಯ: ವಿಸ್ತೃತ ಚರ್ಚೆಯ ಅಗತ್ಯವಿರುವುದರಿಂದ ಮುಂದಿನ ಸಭೆಗೆ ಮಂಡಿಸಲು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:ಎಸಿಸಿ:ಸಾ.ಸ.2:58(2022)**

ವಿಷಯ: ಶೈಕ್ಷಣಿಕ ವರ್ಷ 2021–22ನೇ ಸಾಲಿನ ಪರೀಕ್ಷಾ ಶುಲ್ಕ ಹಾಗೂ ಇತರ ಶುಲ್ಕಗಳನ್ನು ನಿಗದಿಪಡಿಸುವ ಬಗ್ಗೆ.

ನಿರ್ಣಯ: ವಿಶ್ವವಿದ್ಯಾನಿಲಯದ ಶುಲ್ಕ ಪರಿಷ್ಕರಣಾ ಸಮಿತಿ ಸಭೆಯ ಶಿಫಾರಸ್ಸನ್ನು ಅನುಮೋದಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:ಎಸಿಸಿ:ಸಾ.ಸ.2:59(2022)**

ವಿಷಯ: ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ನಡೆಸಲಾಗುವ Post Doctoral ಕಾರ್ಯಕ್ರಮಕ್ಕೆ ಸಂಬಂಧಿಸಿ ತಯಾರಿಸಲಾಗಿರುವ ಮಾರ್ಗಸೂಚಿಯಅನುಮೋದನೆ ಬಗ್ಗೆ.

ನಿರ್ಣಯ: ಶೈಕ್ಷಣಿಕ ಮಂಡಳಿ ಸಭೆಯಲ್ಲಿ ಮಂಡಿಸಿದ ಬಳಿಕ ಸಿಂಡಿಕೇಟು ಸಭೆಗೆ ಮಂಡಿಸುವುದು ಸೂಕ್ತ ಎಂದು ನಿರ್ಣಯಿಸಲಾಯಿತು.

**ಕಾರ್ಯಸೂಚಿ ಸಂಖ್ಯೆ:ಕಾನೂನು ಘಟಕ :ಸಾ.ಸ.2:60(2022)**

ವಿಷಯ: ಕರ್ನಾಟಕರಾಜ್ಯ ಉಚ್ಚ ನ್ಯಾಯಾಲಯವು ರಿಟ್‌ಅರ್ಜಿ ಸಂಖ್ಯೆ:15070/2020 (ಎಸ್) ಸಂಬಂಧಿಸಿದಂತೆ ಹೊರಡಿಸಿರುವ ತೀರ್ಪು ದಿನಾಂಕ 20.07.2021ವನ್ನು ಅನುಷ್ಠಾನಗೊಳಿಸಿ ತತ್ಪರಿಣಾಮವಾಗಿ ಸೇವಾ ಸವಲತ್ತುಗಳನ್ನು ಡಾ.ಅರಬಿ .ಯು., ಪ್ರಾಧ್ಯಾಪಕರು, ಅರ್ಥಶಾಸ್ತ್ರ ವಿಭಾಗಇವರಿಗೆ ವಿಸ್ತರಿಸದೇ ಇರುವ ಬಗ್ಗೆ ಡಾ.ಅರಬಿ.ಯು ಇವರು ಕರ್ನಾಟಕ ರಾಜ್ಯ ಉಚ್ಚ ನ್ಯಾಯಾಲಯದಲ್ಲಿ ಹೂಡಿರುವ ನ್ಯಾಯಾಂಗ ನಿಂದನಾ ಅರ್ಜಿ ಸಂಖ್ಯೆ:1038/2021 ಗೆ ಸಂಬಂಧಿಸಿದಂತೆ ಪ್ರತಿವಾದಿಗಳ ಪರವಾಗಿ ಲಿಖಿತ ಹೇಳಿಕೆಗಳನ್ನು ಸಲ್ಲಿಸುವ ಬಗ್ಗೆ.

ನಿರ್ಣಯ: ವಿಸ್ತೃತ ಚರ್ಚೆಯ ಅಗತ್ಯವಿರುವುದರಿಂದ ಮುಂದಿನ ಸಭೆಗೆ ಮಂಡಿಸಲು ನಿರ್ಣಯಿಸಲಾಯಿತು.

**ಇತರ ವಿಷಯಗಳು:**

1. ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಕಾಲೇಜು, ಮಡಿಕೇರಿ ಇಲ್ಲಿ ಸ್ನಾತಕೋತ್ತರ ರಸಾಯನಶಾಸ್ತ್ರ ಕಾರ್ಯಕ್ರಮವನ್ನು ಪ್ರಾರಂಭಿಸುವ ಸಂಬಂಧ ಕೊಠಡಿಗಳ ಕಾಮಗಾರಿ ಕಾರ್ಯವನ್ನು ಅತೀ ಶೀಘ್ರದಲ್ಲಿ ಕೈಗೆತ್ತಿಕೊಳ್ಳಲು ಸಂಬಂಧಿತ ಕಾರ್ಯಕಾರಿ ಅಭಿಯಂತರರಿಗೆ ಸೂಚಿಸಲಾಯಿತು.

2. ಮಂಗಳೂರು ವಿಶ್ವವಿದ್ಯಾನಿಲಯದ ಸಿಬ್ಬಂದಿಗಳ ವಸತಿಗೃಹಗಳಲ್ಲಿ ಇರುವ ನ್ಯೂನತೆಗಳು ಮತ್ತು ಕಾಮಗಾರಿಗಳ ತಾರತಮ್ಯಗಳ ವಿಚಾರಗಳು ಸಭೆಯ ಗಮನಕ್ಕೆ ಬಂದಿದ್ದು, ಈ ಬಗ್ಗೆ ಸುದೀರ್ಘವಾದ ಚರ್ಚೆಯ ಬಳಿಕ ಮಂಗಳೂರು ವಿಶ್ವವಿದ್ಯಾನಿಲಯದ ಎ, ಬಿ, ಸಿ, ವಸತಿಗೃಹಗಳ ವಸ್ತುಸ್ಥಿತಿಯ ಬಗ್ಗೆ ವೀಡಿಯೋ ರೆಕಾರ್ಡ್ ಸಹಿತ ಮುಂದಿನ ಸಿಂಡಿಕೇಟು ಸಭೆಗೆ ವರದಿ ನೀಡಲು ಕಾರ್ಯಕಾರಿ ಅಭಿಯಂತರರಿಗೆ ಸೂಚಿಸಲಾಯಿತು.

3. ಮಂಗಳೂರು ವಿಶ್ವವಿದ್ಯಾನಿಲಯದ ಹಣಕಾಸು ವಿಭಾಗದ ಲೆಕ್ಕಾಚಾರಗಳನ್ನು Double Entry System ನಲ್ಲಿ ಈಗಾಗಲೇ ಕೈಗೆತ್ತಿಕೊಳ್ಳಲಾಗಿದ್ದು, ಸದರಿ ಕಾರ್ಯಕ್ಕೆ ಸಂಬಂಧಿಸಿ ಎಲ್ಲಾ ಕಾರ್ಯನಿರ್ವಹಣೆಯ ಪೂರ್ಣ ಜವಾಬ್ದಾರಿಯನ್ನು ಹಣಕಾಸು ವಿಭಾಗದ ಸಹಾಯಕ ಹಣಕಾಸು ಅಧಿಕಾರಿಯವರಿಗೆ ವಹಿಸಲು ನಿರ್ಣಯಿಸಲಾಯಿತು.

4. ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಎಲ್ಲಾ ವಿಭಾಗಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳು ಕಡ್ಡಾಯವಾಗಿ case worker diary ನಿರ್ವಹಿಸಲು ಸೂಕ್ತ ಕ್ರಮಕೈಗೊಳ್ಳಬೇಕೆಂಬುದಾಗಿ ಹಾಗೂ ಎಲ್ಲಾ ಕಚೇರಿಗಳಲ್ಲಿ ಸಕಾಲ ಫಲಕವನ್ನು ಲಗತ್ತಿಸಿ ಅನುಷ್ಠಾನಗೊಳಿಸಲು ಸೂಚಿಸಲಾಯಿತು.

5. ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ಪರೀಕ್ಷಾ ಕಾರ್ಯಕ್ಕೆ ಸಂಬಂಧಿಸಿ ಮೌಲ್ಯಮಾಪನ ಕಾರ್ಯಕ್ಕೆ ಅತಿಥಿ ಉಪನ್ಯಾಕರುಗಳನ್ನೇ ಬಳಸಿಕೊಳ್ಳುತ್ತಿರುವ ವಿಚಾರವನ್ನು ಸಿಂಡಿಕೇಟು ಗಂಭೀರವಾಗಿ ಪರಿಗಣಿಸಿಕೊಂಡು ಖಾಯಂ ಶಿಕ್ಷಕರು ಮೌಲ್ಯಮಾಪನ ಕಾರ್ಯಕ್ಕೆ ತಮ್ಮ ಅಸಮ್ಮತಿಯನ್ನು ಸೂಚಿಸಿರುವ ವಿಚಾರವು ಸಭೆಯ ಗಮನಕ್ಕೆ ಬಂದಿರುವ ಹಿನ್ನೆಲೆಯಲ್ಲಿ ಅಸಮ್ಮತಿ ತಿಳಿಸಿದ ಖಾಯಂ ಶಿಕ್ಷಕರ ಪಟ್ಟಿಯನ್ನು ತಯಾರಿಸಲು ಕುಲಸಚಿವರು (ಪರೀಕ್ಷಾಂಗ) ಇವರಿಗೆ ಸೂಚಿಸಲಾಯಿತು.

   ಖಾಯಂ ಶಿಕ್ಷಕರು ಮೌಲ್ಯಮಾಪನ ಕಾರ್ಯವನ್ನು ಕಡ್ಡಾಯವಾಗಿ ಕೈಗೊಳ್ಳಬೇಕಾಗಿ ಹಾಗೂ ಮೌಲ್ಯಮಾಪನ ಕಾರ್ಯಗಳಿಗೆ ಸಂಬಂಧಿಸಿ ಪಾವತಿಸುವ ಸಂಭಾವನೆ ಮೊತ್ತವು ವಿಳಂಬವಾಗಿ ಬಟಾವಣೆಯಾಗುವ ಹಿನ್ನೆಲೆಯಲ್ಲಿ ಸದರಿ ಪಾವತಿಯನ್ನು spot payment ಮೂಲಕ ಪಾವತಿಗೆ ಸೂಕ್ತ ಕ್ರಮಕೈಗೊಳ್ಳಬೇಕಾಗಿ ಕುಲಸಚಿವರು (ಪರೀಕ್ಷಾಂಗ) ಇವರಿಗೆ ತಿಳಿಸಲಾಯಿತು.

6. ಮಂಗಳೂರು ವಿಶ್ವವಿದ್ಯಾನಿಲಯದ ದೈಹಿಕ ಶಿಕ್ಷಣ ವಿಭಾಗದ ಡಾ ಪ್ರಸನ್ನ ಬಿ ಕೆ, ಸಹಾಯಕ ನಿರ್ದೇಶಕರು ಇವರ ವಿರುದ್ಧ ಅದೇ ವಿಭಾಗದ ಸ್ನಾತಕೋತ್ತರ ಕಾರ್ಯಕ್ರಮಗಳ ವಿದ್ಯಾರ್ಥಿಗಳಿಂದ ಸ್ವೀಕೃತವಾಗಿರುವ ದೂರು ಪತ್ರವನ್ನು ಸಭೆಯಲ್ಲಿ ಓದಲಾಗಿ ಸದರಿ ಶಿಕ್ಷಕರನ್ನು ಮಾನ್ಯ ಕುಲಪತಿಯವರು, ವಿಭಾಗದ ಅಧ್ಯಕ್ಷರು ಮತ್ತು ಕುಲಸಚಿವರ ಸಮ್ಮುಖದಲ್ಲಿ ಕರೆಸಿಕೊಂಡು ವಿಷಯದ ಬಗ್ಗೆ ಅವಲೋಕಿಸಲಾಗುವ ವಿಚಾರವನ್ನು ಸಭೆಗೆ ತಿಳಿಸಲಾಯಿತು.

7. ಕಾನೂನು ಘಟಕದಲ್ಲಿ ಕಾನೂನು ತಜ್ಞರ ಅವಶ್ಯಕತೆಯಿರುವುದಾಗಿ ಸದಸ್ಯರಾದ ಶ್ರೀ ವಿವೇಕಾನಂದ ಪನಿಯಾಲರವರು ತಿಳಿಸಿದರು. ಈ ಹಿಂದೆ ಡಾ. ಪಾರ್ವತಿ ಅಪ್ಪಯ್ಯರವರ ಪ್ರಕರಣದಲ್ಲಿ ಕಾನೂನು ಘಟಕದಿಂದ ಸೂಕ್ತ ಮಾಹಿತಿಯನ್ನು ನೀಡದೆ ಸದಸ್ಯರಿಗೆ ತೊಂದರೆಯಾಗಿರುವುದಾಗಿ ತಿಳಿಸಿದರು. ಅಲ್ಲದೆ ಕಾನೂನು ಘಟಕಕ್ಕೆ ನಿವೃತ್ತ ನ್ಯಾಯಾಧೀಶರನ್ನು ನೇಮಕಾತಿ ಮಾಡಲು ಈಗಾಗಲೇ ಕ್ರಮಕೈಗೊಂಡಿರುವುದರಿಂದ ಮುಂದಿನ ಆದೇಶದವರೆಗೆ ಶ್ರೀಮತಿ ಸಹನಾ ಆಳ್ವ ಇವರಿಗೆ ಕರ್ತವ್ಯ ನಿರ್ವಹಿಸಲು ತಿಳಿಸುವುದು ಮತ್ತು ಕಾನೂನು ಘಟಕದಲ್ಲಿರುವ ಇತರ ಸಿಬ್ಬಂದಿಗಳನ್ನು ಬೇರೆ ವಿಭಾಗಕ್ಕೆ ವರ್ಗಾವಣೆ ಮಾಡಲು ನಿರ್ಣಯಿಸಲಾಯಿತು.

8. ಮಂಗಳೂರು ವಿಶ್ವವಿದ್ಯಾನಿಲಯದ ಶಿಕ್ಷಕೇತರ ಸಿಬ್ಬಂದಿಗಳ ಜೇಷ್ಠತಾ ಪಟ್ಟಿಯಲ್ಲಿ ಪರಿಶಿಷ್ಟ ಜಾತಿ/ಪಂಗಡದ ಸಿಬ್ಬಂದಿಗಳಿಗೆ ಸಂಬಂಧಿಸಿ ಈ ಹಿಂದೆ ಉಂಟಾಗಿದೆ ಎನ್ನಲಾದ ನ್ಯೂನತೆ ಬಗ್ಗೆ ಸದಸ್ಯರೊಬ್ಬರು ಸಭೆಯಲ್ಲಿ ಸುದೀರ್ಘವಾಗಿ ಚರ್ಚಿಸಿದ ಹಿನ್ನೆಲೆಯಲ್ಲಿ ಶಿಕ್ಷಕೇತರ ಸಿಬ್ಬಂದಿಗಳ ಜೇಷ್ಠತಾ ಪಟ್ಟಿಗೆ ಸಂಬಂಧಿಸಿ ರಚಿಸಲಾದ ಸಮಿತಿಯ ಅಂತಿಮ ವರದಿಯನ್ನು ಮುಂದಿನ ಸಿಂಡಿಕೇಟು ಸಭೆಗೆ ಮಂಡಿಸಲು ನಿರ್ಣಯಿಸಲಾಯಿತು. ಮುಂದುವರಿದು, ಮಂಗಳೂರು ವಿಶ್ವವಿದ್ಯಾನಿಲಯದ ಶಿಕ್ಷಕೇತರ ಸಿಬ್ಬಂದಿಗಳ ಜೇಷ್ಠತಾ ಪಟ್ಟಿಯನ್ನು 1978ನೇ ಸಾಲಿನಿಂದ ಪುನರ್ ಪರಿಶೀಲಿಸಿ ವ್ಯತ್ಯಯಗಳನ್ನು ಸರಿಪಡಿಸಿಕೊಳ್ಳಲು ಪ್ರೊ.ವಿಶ್ವನಾಥ್ ಇವರ ಅಧ್ಯಕ್ಷತೆಯಲ್ಲಿ ಸಮಿತಿಯನ್ನು ರಚಿಸಲು ನಿರ್ಣಯಿಸಲಾಯಿತು.

9. ಮಂಗಳೂರು ವಿಶ್ವವಿದ್ಯಾನಿಲಯದಲ್ಲಿ ನ್ಯಾಯವಾದಿಗಳ ಯಾದಿಯನ್ನು ಪರಿಷ್ಕರಿಸುವವರೆಗೆ ಶ್ರೀ ಟಿ.ಪಿ.ರಾಜೇಂದ್ರ ಕುಮಾರ್ ಸುಂಗೆ, ನ್ಯಾಯವಾದಿಗಳು ಇವರಿಗೆ ವಿಶ್ವವಿದ್ಯಾನಿಲಯದ ಯಾವುದೇ ಹೊಸ ನ್ಯಾಯಾಂಗ ಪ್ರಕರಣಗಳನ್ನು ವಹಿಸಬಾರದಾಗಿ ಸಭೆಯಲ್ಲಿ ನಿರ್ಣಯಿಸಲಾಯಿತು.

10. ಕೇಂದ್ರೀಯ / ರಾಜ್ಯದ ಇತರೇ ವಿಶ್ವವಿದ್ಯಾನಿಲಯಗಳಲ್ಲಿ ಸಿಂಡಿಕೇಟು ಸದಸ್ಯರುಗಳಿಗೆ ನೀಡಲಾಗುವ ಉಪಸ್ಥಿತಿ ಭತ್ಯೆಯನ್ನು ಪರಿಷ್ಕರಿಸಿರುವ ಹಿನ್ನೆಲೆಯಲ್ಲಿ ಮಂಗಳೂರು ವಿಶ್ವವಿದ್ಯಾನಿಲಯದಲ್ಲಿಯೂ ಸದರಿ ಉಪಸ್ಥಿತಿ ಭತ್ಯೆಯನ್ನು ರೂ.3,000/– ರಿಂದ 5,000/– ಕ್ಕೆ ಪರಿಷ್ಕರಿಸಲು ನಿರ್ಣಯಿಸಲಾಯಿತು.

11. ಮಂಗಳೂರು ವಿಶ್ವವಿದ್ಯಾನಿಲಯದ 40ನೇ ವಾರ್ಷಿಕ ಘಟಿಕೋತ್ಸವ ಕಾರ್ಯಕ್ರಮವನ್ನು ಏಪ್ರಿಲ್ 16, 2022ರಂದು ನಡೆಸುವುದಾಗಿ ಮಾನ್ಯ ಕುಲಪತಿಯವರು ಸಭೆಗೆ ತಿಳಿಸಿದರು.

ಮಾನ್ಯ ಕುಲಪತಿಗಳು ಸದಸ್ಯರ ಸಲಹೆ ಸಹಕಾರಗಳಿಗೆ ಧನ್ಯವಾದಗಳನ್ನು ಅರ್ಪಿಸಿ ಸಭೆಯನ್ನು ಮುಕ್ತಾಯಗೊಳಿಸಿದರು.

**ಸಹಿ/-** | **ಸಹಿ/-**

**ಕುಲಸಚಿವರು** | **ಕುಲಪತಿಗಳು**